

# ಕ್ಯಾ... ಕ್ಯಾಬೇಜ್!

ಇಂಗ್ಲೆಂಡಿನ ನಿವೃತ್ತ ಇಂಜಿನಿಯರ್‌ನೊಬ್ಬ ಭಾರಿ ಗಾತ್ರದ ಕ್ಯಾಬೇಜ್‌ಅನ್ನು ಬೆಳೆದು, ನುರಿತ ರೈತರೂ ಮೂಗಿನ ಮೇಲೆ ಬೆರಳು ಇರಿಸುವಂತೆ ಮಾಡಿದ್ದಾನೆ. ವೆಸ್ಟ್ ಮಿಡ್‌ಲ್ಯಾಂಡ್ಸ್‌ನ ಡೂಡ್ಲೆ ಎಂಬಲ್ಲಿನ 74ರ ಇಳಿವಯಸ್ಸಿನ ಮುತ್ತಜ್ಜ ಟೋನಿ ಸೌಥಾಲ್ ಎಂಬಾತ ತನಗೆ ಹಂಚಿಕೆಯಾಗಿದ್ದ 148 ಚದರಡಿ ಜಾಗದಲ್ಲಿ, ಪ್ರಪಂಚದಲ್ಲೇ ದೊಡ್ಡ ಕೋಸನ್ನು ಬೆಳೆದು ತೋರಿಸಿದ್ದಾನೆ. ಇದರ ತೂಕ 11.3 ಕೆ.ಜಿ ಇದೆ! ಹಾಗೆಂದು ಕರಾರುವಾಕ್ಕಾಗಿ ತೂಕವನ್ನು ಊಹೆ ಮಾಡಿ ಹೇಳಿದ ವೀಕ್ಷಕನೊಬ್ಬನಿಗೆ ಒಂದು ಬಾಟಲ್ ವಿಸ್ಕಿಯನ್ನೂ ಟೋನಿ ಬಹುಮಾನವಾಗಿ ನೀಡಿದ್ದಾನೆ.

'ನಾನು 60 ಪೌಂಡ್‌ಗಳಷ್ಟು ತೂಕದ ಭಾರೀ ಕ್ಯಾಬೇಜ್ ಬೆಳೆದಿದ್ದೇನೆ ಎಂದರೆ ಯಾವ ರೈತರೂ ನಂಬಲು ತಯಾರಿರಲಿಲ್ಲ' ಎಂದು ನಗುವ ಟೋನಿ, ಆ ಕ್ಯಾಬೇಜನ್ನು ವೃದ್ಧಾಶ್ರಮಕ್ಕೆ ದಾನ ಮಾಡಿದ್ದಾನೆ.

ಇದಕ್ಕಿಂತಲೂ ದೊಡ್ಡ ಗಾತ್ರದ ಇನ್ನೊಂದು ಕ್ಯಾಬೇಜ್ ಬೆಳೆಯುವುದಾಗಿ ಇದೀಗ ಟೋನಿ ಹೊಸ ಸವಾಲು ಎಸೆದಿದ್ದಾನೆ. 'ಆ್ಯಮ್‌ಲೆಕೋಟ್ ರಾಯಲ್ ಬ್ರಿಟಿಷ್ ಲೆಜಿಯಾನ್ ಎಂಬಲ್ಲಿಗೆ ಮುಂದಿನ ತಿಂಗಳು ಬನ್ನಿ, ಹೊಸ ದಾಖಲೆ ತೋರಿಸುತ್ತೇನೆ' ಎಂದು ಆತ ಈಗಾಗಲೆ ಹೇಳಿದ್ದಾನೆ. ಆದರೆ ಅದರ ತೂಕದ ಬಗ್ಗೆ ಬಾಯಿ ಬಿಟ್ಟಿಲ್ಲ. ಯಾಕೆಂದರೆ ಅಲ್ಲೂ ಸರಿಯಾದ ತೂಕವನ್ನು ಊಹಿಸಿದವರಿಗೆ ಬಹುಮಾನ ನೀಡುವ ಇರಾದೆ ಟೊನಿಯದು.

ಈ ಕೋಸು ಇಷ್ಟೊಂದು ಭಾರೀ ಗಾತ್ರದಲ್ಲಿ ಬೆಳೆಯಲು ಕಾರಣವೇನು? 'ಕೊಳೆತ ತರಕಾರಿಯ ವಾಸನೆಯುಳ್ಳ ಕಂಫ್ರೆಯ್ ಎನ್ನುವ ಗಿಡ-ಮೂಲಿಕೆಯ ದ್ರಾವಣವನ್ನು ಕಾಂಪೋಸ್ಟ್-ನೊಂದಿಗೆ ಬೆರೆಸಿ ಹಾಕಿರುವುದೇ ಕೋಸು ಇಷ್ಟು ದೊಡ್ಡ ಗಾತ್ರ ಬೆಳೆಯಲು ಕಾರಣ' ಎಂದು ಟೋನಿ ಹೇಳಿದ್ದಾನೆ. ಈಗಾಗಲೆ ಉದ್ದನೆಯ ಬೀನ್ಸ್, ಕ್ಯಾರೆಟ್, ಹೂಕೋಸು, ಗಡ್ಡೆ ತರಕಾರಿಗಳನ್ನೂ ಈತ ಬೆಳೆಸಿದ್ದಾನೆ. ತಾನು ಬೆಳೆದ ಉದ್ದನೆಯ ತರಕಾರಿಗಳನ್ನು ಈತ ನಾಲ್ಕು ಶೈತ್ಯಾಗಾರಗಳಲ್ಲಿ ಇಟ್ಟು ವರ್ಷವಿಡೀ ಬಳಸುತ್ತಾನಂತೆ. ಈತ ಮಾರುಕಟ್ಟೆಯಲ್ಲಿ ತರಕಾರಿಗಳನ್ನು ಖರೀದಿಸುವುದಿಲ್ಲವಂತೆ!



■ ವಿದ್ಯಾ ವಿ ಹಾಲಭಾವಿ